51(131) ಶ್ರೀ ಗುಯಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಯಾವ ಯಾವ ಗ್ರಾಮಗಳಲ್ಲಿ ಹೊಸ ಕೆರೆಗಳ ನಿರ್ಮಾಣಕ್ಕಾಗಿ ಸರ್ವೆ ಮಾಡಲಾಗಿದೆ ಮತ್ತು ಯಾವಾಗ ಈ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ;

ಆ) ಈ ಪೈಕಿ ಯಾವ ಯಾವ ಗ್ರಾಮಗಳಲ್ಲಿ ಹೊಸ ಕೆರೆಗಳ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ;

ಇ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸ ಕೆರೆಗಳ ನಿರ್ಮಾಣ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು ಮತ್ತು ಇದರ ಅಂದಾಜು ವೆಚ್ಚವೆಷ್ಟು;

ಈ) ಹೊಸ ಕೆರೆಗಳ ನಿರ್ಮಾಣದಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯಲಿದೆ?

ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ ಸಚಿವರು) :

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಈ ಕೆಳಗಿನ ಕಾಮಗಾರಿಗಳ ಸರ್ವೆ ಕಾರ್ಯ ಪೂರ್ಣಗೊಂಡಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಸರ್ವೆ ಪೂರ್ಣಗೊಂಡ ವರ್ಷ
1	ಬೆಂಬ್ರಾ ಕೆರೆ	1993–94
2	ಕೌಡಗಾಂವ ಕೆರೆ	1993–94
3	ಆಲೂರು ಬೇಲೂರು ಕೆರೆ	1997–98
4	ಅಕನಾಪೂರ ಕೆರೆ	2005–06
5	ನಾಗಮಾರಪಳ್ಳಿಕೆರೆ	2004–05
6	ಸೂರಳ್ಳಿ ಕೆರೆ	1998–99
7	ನಾಗನೂರಬಾಬಜಿ	1998–99

ಆ) 1. ಬೆಂಬ್ರಾ ಕೆರೆ

2. ನಾಗಮಾರಪಳ್ಳಿಕೆರೆ

3. ಆಲೂರು ಬೇಲೂರು (ಪ್ರಸ್ತುತ ಸ್ಥಗಿತಗೊಂಡಿರುತ್ತದೆ)

ಇ) 2005–06ನೇ ಸಾಲಿನ ಆಯವ್ಯಯದಲ್ಲಿ ನಾಗಮಾರಪಳ್ಳಿ ಹೊಸ ಕೆರೆ ನಿರ್ಮಾಣ ಕಾಮಗಾರಿ ಸೇರಿದೆ. ಅಂದಾಜು ವೆಚ್ಚ ರೂ. 78.00 ಲಕ್ಷಗಳು.

ಈ) 551 ಹೆಕ್ಟೇರ್‌ಗಳು.